
# ಕಥೋಪದೇಶ – ಹಿತೋಪದೇಶದ ಕಥೆ

## ಚತುರಕನ ಚತುರತೆ



ಒಂದು ಕಾಡು. ಅಲ್ಲಿ ಚತುರಕನೆಂಬ ನರಿ. ಅದು ಕಾಡಿನಲ್ಲಿ ಅಲೆದಾಡುತ್ತಿತ್ತು. ಒಮ್ಮೆ ಅದು ಒಂದು ಆನೆ ಸತ್ತು ಬಿದ್ದಿರುವುದನ್ನು ನೋಡಿತು. ಅದರ ಸುತ್ತಲೂ ಸುತ್ತಾಡಿ ಪರೀಕ್ಷಿಸಿತು. ಆನೆಗೆ ದಪ್ಪ ಚರ್ಮ. ಅದನ್ನು ಸುಲಿದು, ಮಾಂಸವನ್ನು ತಿನ್ನಲು ನರಿಗೆ ಸಾಧ್ಯವಾಗಲಿಲ್ಲ. ಈಗ ಏನು ಮಾಡುವುದು?

ಆಗ ಒಂದು ಸಿಂಹ ಬಂತು. ನರಿ ವಿನಯದಿಂದ ಅದಕ್ಕೆ ಹೇಳಿತು, "ಸ್ವಾಮಿ, ಈ ಆನೆಯನ್ನು ನಿಮಗಾಗಿ ಮೀಸಲಿಟ್ಟಿದ್ದೇನೆ. ದಯವಿಟ್ಟು ಇದನ್ನು ಸ್ವೀಕರಿಸಿ." ಸಿಂಹಕ್ಕೆ ಇದರಿಂದ ಸಂತೋಷ ವಾಯಿತು. ಆದರೆ ಅದಕ್ಕೆ ಈಗಾಗಲೇ ಹೊಟ್ಟೆ ತುಂಬಿತ್ತು. "ಬೇರೆಯವರು ಕೊಂದ ಪ್ರಾಣಿಯನ್ನು ನಾನು ತಿನ್ನುವುದಿಲ್ಲ. ಆದ್ದರಿಂದ ಈ ಆನೆಯನ್ನು ನಿನಗೇ ಬಿಟ್ಟಿರುವೆ. ಇದನ್ನು ತಿಂದು ಹಸಿವೆಯನ್ನು ನೀಗಿಸಿಕೋ" ಎಂದು ಹೇಳಿ ಅಲ್ಲಿಂದ ಹೊರಟುಹೋಯಿತು.

ಆಮೇಲೆ ಒಂದು ಹುಲಿ ಬಂತು. ಕಪಟಿಯಾದ ನರಿ ಅದಕ್ಕೆ ಹೀಗೆ ಹೇಳಿತು, "ಹುಲಿಮಾವ, ಈ ಆನೆಯನ್ನು ಸಿಂಹವು ಕೊಂದಿದೆ. ನನ್ನನ್ನು ಕಾವಲಿರಿಸಿ ಹೋಗಿದೆ. ನೀನೇನಾದರೂ ಇದನ್ನು ಮುಟ್ಟಿದರೆ, ನಿನಗೆ ಸಾವು ಖಂಡಿತ." ಈ ಮಾತನ್ನು ಕೇಳಿದ ಹುಲಿ ಹೆದರಿ, ಅಲ್ಲಿಂದ ಪಲಾಯನ ಮಾಡಿತು.

ಹೇಗಾದರೂ ಮಾಡಿ ಆನೆಯ ಚರ್ಮವನ್ನು ಯಾರಿಂದಲಾದರೂ ಸುಲಿಸಬೇಕೆಂದು ನರಿ ಯೋಚಿಸುತ್ತಲೇ ಇತ್ತು. ಆಗ ಅಲ್ಲಿಗೆ ಒಂದು ಚಿರತೆ ಬಂತು. ನರಿಗೆ ಬಹಳ ಸಂತೋಷವಾಯಿತು. ಚಿರತೆಗೆ ಹೇಳಿತು, "ಅಣ್ಣಾ, ಇದು ಸಿಂಹ ಕೊಂದು ಸಾಯಿಸಿರುವ ಆನೆ. ನನ್ನನ್ನು ಕಾಯಲು ಬಿಟ್ಟಿದೆ. ಆದರೆ ನೀನು ತುಂಬ ಹಸಿದಿರುವಂತೆ ಕಾಣುತ್ತದೆ. ನೀನು ಇದನ್ನು ತಿನ್ನು. ಸಿಂಹ ಬಂದರೆ ನಾನು ಸೂಚನೆ ಕೊಡುತ್ತೇನೆ. ಆಗ ಒಡನೆ ಓಡಿ ಹೋಗು" ಎಂದಿತು.

ಚಿರತೆ, ತನ್ನ ಹರಿತವಾದ ಹಲ್ಲುಗಳಿಂದ, ಆನೆಯ ಚರ್ಮವನ್ನು ಸುಲಿಯಲು ಆರಂಭಿಸಿತು. ಅದು ಮುಗಿದೊಡನೆ, ನರಿ ಕೂಗಿಕೊಂಡಿತು: "ಮಿತ್ರ, ಸಿಂಹ ಬರುತ್ತಿದೆ. ಬೇಗ ಹೊರಡು." ಚಿರತೆ, ಅಲ್ಪಸ್ವಲ್ಪ ಮಾಂಸವನ್ನು ಕಚ್ಚಿಕೊಂಡು ಓಡಿಹೋಯಿತು.

ನರಿ, ಈಗ ಸುಲಭವಾಗಿ ಮಾಂಸವನ್ನು ತಿನ್ನತೊಡಗಿತು. ಆದರೆ ಸ್ವಲ್ಪ ಸಮಯದಲ್ಲಿಯೇ, ಇನ್ನೊಂದು ಬಲಿಷ್ಠ ನರಿ ಅಲ್ಲಿಗೆ ಬಂತು; ಈ ನರಿಯನ್ನು ಗಾಯಗೊಳಿಸಿ, ಓಡಿಸಿಬಿಟ್ಟಿತು; ಅನೇಕ ದಿನಗಳ ತನಕ, ಮಾಂಸವನ್ನು ತಿನ್ನುತ್ತಿತ್ತು.

ಅದಕ್ಕೇ ಹೇಳುವುದು:

**ಯಥಾ ಕಾಲಕೃತೋದ್ಯೋಗಾತ್ ಕೃಷಿಃ ಫಲವತೀ ಭವೇತ್ ।**
**ತದ್ವತ್ ನೀತಿರಿಯಂ ದೇವ ಚಿರಾತ್ ಫಲತಿ ನ ಕ್ಷಣಾತ್ ॥**

"ಬಹಳ ದಿನಗಳ ಶ್ರಮದಿಂದ ಮಾಡಿದ ಕೃಷಿ ಫಲದಾಯಕ ವಾಗುವುದು. ಹಾಗೆಯೇ, ಬಹಳ ದಿನಗಳ ಕಾಲ ಬಾಳಿದ ನೀತಿಯುಕ್ತ ಬಾಳು ಶಾಶ್ವತವಾದ ಫಲಕೊಡುವುದೇ ಹೊರತು, ಕ್ಷಣಾರ್ಧದಲ್ಲಿ ಮಾಡಿದ (ಕಪಟ) ಕೆಲಸವಲ್ಲ."

### ಭಾರತದೇಶದ ಸಂತಪುರುಷರು – ಭಗವಾನ್ ವೇದವ್ಯಾಸರು

ವೇದವ್ಯಾಸರ ನಿಜವಾದ ಹೆಸರು ಕೃಷ್ಣ ದ್ವೈಪಾಯನ. ಅವರು ಪರಾಶರ ಮುನಿ ಮತ್ತು ಸತ್ಯವತಿಯರ ಪುತ್ರ. ಇವರು ವೇದವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದರು. ಅವು **ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ.** ಅದಕ್ಕೆ ಅವರನ್ನು ವೇದವ್ಯಾಸ ಎಂದು ಕರೆಯುತ್ತಾರೆ. ಇವರು ಹದಿನೆಂಟು ಪುರಾಣಗಳನ್ನು ಕೂಡ ರಚಿಸಿದರು ಎಂದು ಹೇಳುತ್ತಾರೆ. ವ್ಯಾಸರು ಮಹಾಭಾರತವನ್ನೂ ರಚಿಸಿದರು. ಗಣೇಶ ಅವರಿಗೆ ಲಿಪಿಕಾರನಾಗಿದ್ದನು. ಅದಲ್ಲದೆ ವ್ಯಾಸರು ಭಾಗವತ ಮಹಾಪುರಾಣವನ್ನೂ ರಚಿಸಿದರು ಎಂಬ ನಂಬಿಕೆ ಇದೆ. ಹೀಗೆ ವ್ಯಾಸರು ಜನರಲ್ಲಿ ಧರ್ಮಭಾವನೆಯನ್ನು ಹರಡಲು ಬಹಳವಾಗಿ ಶ್ರಮಿಸಿದರು. "ಪರೋಪಕಾರ ಪುಣ್ಯವನ್ನು ತರುತ್ತದೆ. ಬೇರೆಯವರನ್ನು ಪೀಡಿಸುವುದು ಪಾಪಕ್ಕೆ ಕಾರಣ. ಇದೇ ಧರ್ಮದ ಸಾರ" ಎಂದು ವ್ಯಾಸರು ಹೇಳುತ್ತಾರೆ. ಹೀಗೆ ವ್ಯಾಸರು ಭಾರತೀಯರೆಲ್ಲರಿಗೂ ಪೂಜ್ಯರಾಗಿದ್ದಾರೆ.



# ಕಥೋಪದೇಶ

## ಅಳುವವನು



ಅವನ ಮುಖವೇ ಅಳುಮುಖ. ಯಾವಾಗಲೂ ಅವನು ಅಳುತ್ತಿದ್ದ, ಕ್ಷಣಕ್ಷಣಕ್ಕೂ ಗೊಣಗುತ್ತಿದ್ದ. ಯಾವಾಗಲೂ ದುಃಖ, ದುಗುಡ ಅವನಿಗೆ. ಅವನು ಒಮ್ಮೆ ದಾರಿಯಲ್ಲಿ, ಹೀಗೇ ಅಳುತ್ತ ಹೋಗುತ್ತಿದ್ದ. ಅವನ ಗೆಳೆಯನೊಬ್ಬ ಕನಿಕರದಿಂದ ಅವನನ್ನು ಕೇಳಿದ: "ಏನಯ್ಯಾ, ಪ್ರೀತಿಯ ಗೆಳೆಯ, ಏಕೆ ಅಳುತ್ತಿದ್ದೀಯೆ?" ಅದಕ್ಕೆ ಅಳುವವನು ಹೇಳಿದ, "ನೋಡಣ್ಣ, ನನ್ನ ಆಪ್ತನೊಬ್ಬ ತೀರಿಕೊಂಡ." ಆ ಗೆಳೆಯ, "ಅಯ್ಯೋ ಪಾಪ" ಎಂದು ಸಂತೈಸಿದ.

ಇನ್ನೊಂದು ದಿನ, ಊರಿನ ಧನಿಕ ಸತ್ತುಹೋದ. ಅವನ ಶವಯಾತ್ರೆ ನಡೆಯುತ್ತಿತ್ತು. ನೆಂಟರಿಷ್ಟರು, ಉಪಕಾರ ಹೊಂದಿದವರು, ಇತರರು ಎಲ್ಲರೂ ಆ ಶವಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಆ ಗುಂಪಿನ ಹಿಂದೆ 'ಅಳುವವನು' ಕೂಡ ಇದ್ದ. ಅವನ ಗೆಳೆಯ ಮತ್ತೆ ಕೇಳಿದ, "ಏನಯ್ಯಾ, ಇಲ್ಲಿ ನೀನೇಕೆ ಅಳುತ್ತಿದ್ದೀಯೆ?" ಅದಕ್ಕೆ 'ಅಳುವವನು' ಅಳುತ್ತಲೇ ಹೇಳಿದ, "ನನಗೂ ಈ ಧನಿಕನಿಗೂ ಏನೂ ಸಂಬಂಧವಿಲ್ಲ. ಆದರೂ ಭಗವಂತ ಎಷ್ಟು ನಿರ್ದಯಿ! ಹೀಗೇಕೆ ಮಾಡಿಬಿಟ್ಟ!" ಎಂದು ಯೋಚಿಸುತ್ತ ಅಳುತ್ತಿದ್ದೇನೆ."

**ಹೀಗೆ ನಾವು ಸಮಸ್ಯೆಗಳ ಬಗ್ಗೆ ಚಿಂತಿಸುತ್ತ, ಅಳುತ್ತಿದ್ದರೆ ಏನೂ ಪ್ರಯೋಜನವಿಲ್ಲ. ನಾವು ನಮ್ಮ ಜೀವನದಲ್ಲಿ ಪಡೆದ ಸುಖ–ಆನಂದಗಳ ಬಗ್ಗೆ ಯೋಚಿಸುತ್ತ, ತೃಪ್ತಿ ಪಡಬೇಕೇ ಹೊರತು, ಕಷ್ಟ–ಸಮಸ್ಯೆಗಳ ಬಗ್ಗೆ ಯೋಚಿಸುತ್ತ, ದುಃಖ ಪಡಬಾರದು. ಇಲ್ಲದಿದ್ದರೆ, 'ಅಳುವವನು' ಮಾಡುವ ಹಾಗೆ ಎಲ್ಲದಕ್ಕೂ ಅಳುತ್ತ ಇರಬೇಕಾಗುತ್ತದೆ. ಹಾಗೆ ಮಾಡದೆ ನಾವು ಯಾವಾಗಲೂ ಸಕಾರಾತ್ಮಕ ಧೋರಣೆ ಹೊಂದಿರಬೇಕು.**

## ಸಂಯಮ



**ಹು**ಸೇನ್ ಧರ್ಮಶಿಕ್ಷಣ ಬೇಕೆಂದು ಮಹಾತ್ಮರೊಬ್ಬರ ಹತ್ತಿರ ಹೋದ. ಅವರ ಶಿಷ್ಯತ್ವ ಮಾಡಿಕೊಂಡು ಇದ್ದ. ಒಂದು ದಿನ ಆ ಮಹಾತ್ಮರು ಹುಸೇನನಿಗೆ ಒಂದು ಚಿಕ್ಕ ಪೆಟ್ಟಿಗೆಯನ್ನು ಕೊಟ್ಟು, "ಇದನ್ನು ನನ್ನ ಗೆಳೆಯನಿಗೆ ಕೊಟ್ಟು ಬಾ" ಎಂದು ಹೇಳಿದರು. ಆ ಪೆಟ್ಟಿಗೆಗೆ ಬೀಗ ಇರಲಿಲ್ಲ. ಅದಲ್ಲದೆ, ಭಾರವೇ ಇಲ್ಲದೆ ಖಾಲಿಯಿದ್ದಂತಿತ್ತು. ಅರ್ಧ ದಾರಿ ನಡೆದ ಹುಸೇನನಿಗೆ ಪೆಟ್ಟಿಗೆಯಲ್ಲಿ ಏನಿದೆ ಎಂದು ತೆರೆದು ನೋಡುವ ಕುತೂಹಲ ಉಂಟಾಯಿತು. ಹಾಗೆ ತೆರೆದು ನೋಡಿದಾಗ, ಪೆಟ್ಟಿಗೆಯಿಂದ ಇಲಿಯ ಮರಿಯೊಂದು ಹಾರಿ ಓಡಿ ಹೋಯಿತು.

ಹುಸೇನ್ ಮಹಾತ್ಮನ ಗೆಳೆಯನಿಗೆ ಪೆಟ್ಟಿಗೆ ಕೊಟ್ಟ. ಆ ಗೆಳೆಯ ಪೆಟ್ಟಿಗೆಯನ್ನು ತೆಗೆದು ನೋಡಿದ. ಅದು ಖಾಲಿಯಾಗಿತ್ತು. "ಮಹಾತ್ಮರು ಇದರಲ್ಲಿ ಏನೋ ಇರಿಸಿರಬೇಕು. ಸಂಯಮವಿಲ್ಲದೆ ನೀನು ಇದನ್ನು ತೆಗೆದುನೋಡಿದೆ. ನಿನಗೆ ಅವರು ದೀಕ್ಷೆ ಕೊಡುವುದಿಲ್ಲ" ಎಂದ.

ಮರಳಿಬಂದ ಹುಸೇನ್, ನಡೆದುದೆಲ್ಲವನ್ನೂ ಮಹಾತ್ಮರಿಗೆ ತಿಳಿಸಿದ. ಅವರು ಹೇಳಿದರು, "ಒಂದು ಇಲಿ ಮರಿಯನ್ನು ರಕ್ಷಿಸಲಾರದವನು, ವಿದ್ಯೆ ಹೇಗೆ ಕಲಿಯಬಲ್ಲೆ! ಮೊದಲು ಸಂಯಮವನ್ನು ಕಲಿತು ನಂತರ ಬಾ."